ಈ ದಿನ ದಿಃ16.05.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕ.05.04.2022 ರಂದು ಆರಕ್ಷಕ ವೃತ್ತ ನಿರೀಕ್ಷಕರಿಗೆ ನೀಡಿದ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದಿನಾಂಕ.17.12.2012 ರಂದು ವರ್ಗಾವಣೆ ಆದೇಶದ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ದಿ.20.10.2015 ರಂದು ಮಾರ್ಪಾಡು ಆದೇಶದ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ದಿ.2.08.2021 ರ ಆದೇಶ ಪ್ರತಿಯನ್ನು ನಿಪಿ-6, ದಿ.6.08.2007 ರ ಆದೇಶದ ಪ್ರತಿಯನ್ನು ನಿಪಿ-7, ದಿ.10.05.2022 ರ ಪತ್ರದೊಂದಿಗೆ ಸಲ್ಲಿಸಲಾದ 253 ಗ್ರಾಹಕರು ನಮ್ಮ ಸಹಕಾರ ಸಂಘದಲ್ಲಿ ಬಂಗಾರವನ್ನು ಅಡಮಾನವಿಟ್ಟ ಗ್ರಾಹಕರ ಯಾದಿಯನ್ನು (ಆರು ಪುಟಗಳು) ಒಳಗೊಂಡು ಪತ್ರವನ್ನು ನಿಪಿ-8, ಆಡಳಿತ ಮಂಡಳಿಯ ಸದಸ್ಯರ ವಿವರದ ದಾಖಲೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-**

ಆರೋಪಿ ಕಾಲಾವಕಾಶ ಕೇಳಿದ್ದು, ಕಾಲಾವಕಾಶವನ್ನು ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.